ನಾನೇ ಬಲವಂತ ಪಡಿಸಿದರೂ ಕೇಳುತ್ತಿರಲಿಲ್ಲ. ಆದರೆ ಅವನನ್ನು ಹೊರಗಿನ ಮೆಟ್ಟಿಲ ಮೇಲೆ ಕೂತು ನೋಡುತ್ತಾ ಕೂರುತ್ತಿದ್ದಳು. ಆಗೆಲ್ಲ ಇದೆಂತಹ ಆಚರಣೆ ಎನಿಸುತ್ತಿತ್ತು. ಆದರೆ ಆ ದಿನಗಳಲ್ಲಿ ಅವಳು ಅವಳ ಮನೆಯಲ್ಲೂ ಮೆಟ್ಟಿಲ ಮೇಲೆ ದಿನ ಕಳೆಯುತ್ತಿದ್ದದ್ದು ನೋಡುವಾಗ ಬೇಸರವಾಗುತ್ತಿತ್ತು.

ಈ ಎಲ್ಲ ಅನುಭವಗಳೂ ಉಪ್ಪಿನಕಾಯಿಗಾಗಿ ಉಪ್ಪಿನ ಜಾಡಿಯಲ್ಲಿ ಹಾಕಿಟ್ಟ ಮಿಡಿ ಮಾವಿನ ಕಾಯಿಗಳಂತೆ ಇನ್ನೂ ಏನನ್ನೋ ಕಾಯುತ್ತಿವೆ ಅನಿಸುತ್ತಿರುತ್ತದೆ. ಈಗೀಗ ತರಗತಿಗಳಲ್ಲಿ ಮಕ್ಕಳು ಪೀರಿಯಡ್ಸ್ ಎಂದರೆ ಅವರ ಮುಖದ ಮೇಲಿನ ನೋವಿನ ಗೆರೆಗಳ ಪ್ರಾಮಾಣಿಕತೆಯನ್ನು ಅನುಮಾನಿಸಬೇಕೆನಿಸುವುದಿಲ್ಲ. ಸುಖಾಸುಮ್ಮನೇ ಅವರ ಕಣ್ಣಂಚು ಒದ್ದೆಯಾಗುವಂತೆ ಮಾಡಿ, ಅಪರಾಧಿಯಾಗಿ ನಿಲ್ಲಲು ಬಯಸುವುದಿಲ್ಲ. ಸುಳ್ಳು ಹೇಳಲು ಭಯ ಹುಟ್ಟಿಸುವಂತ ಪ್ರೀತಿ ಮಮತೆ ಕೊಡುವುದು ಸರಿ ಅನಿಸುತ್ತದೆ. ಅವರ ಲಂಗದೊಳಗಿನ ಬೆವರ ವಾಸನೆ, ಉರಿಯುತ್ತಿರುವ ತೊಡೆಗಳು, ರಕ್ತಸ್ರಾವದ ಕಮಟು, ಕಿಬ್ಬೊಟ್ಟೆಯ ಭೂಕಂಪದ ನೋವು, ಅದರೊಟ್ಟಿಗಿನ ಕೋಪ ಅಸಹನೆ ಸಂಕಟವನ್ನು ತೊಡೆಯ ಮೇಲೆ ತಲೆ ಇರಿಸಿಕೊಂಡು ನೇವರಿಸುತ್ತಾ ತೊಡೆಯಬೇಕೆನಿಸುತ್ತದೆ.

ನನಗೆ ನನ್ನ ಋತುವಿನ ಬಗ್ಗೆ ತಿಳಿದದ್ದು ನಾನು ಋತುಮತಿಯಾದಾಗ. ಆದರೆ ನನಗೆ ತಿಳಿಯದ ಒಂದಂಶ ನನ್ನ ಮಗಳು ಹುಟ್ಟಿದಾಗ ತಿಳಿಯುವ ಸಂದರ್ಭ ಬಂದಿತು. ನನ್ನ ಮಗಳು ಹುಟ್ಟಿ ಎರಡು ದಿನವಾಗಿತ್ತಷ್ಟೇ. ಮೂರನೆ ದಿನ ಬೆಳಗ್ಗೆದ್ದು ಅವಳ ಹಾಸಿಗೆ ಸಮ ಮಾಡುತ್ತಿರುವಾಗ ಅವಳ ಅಡಿ ಹಾಸಿದ್ದ ಬಟ್ಟೆಯ ಮೇಲೆ ರಕ್ತದ ಕಲೆಗಳು ಮೂಡಿರುವುದು ಕಾಣಿಸಿ ಗಾಬರಿಯಾಗಿಬಿಟ್ಟಿತು. ಮಗುವನ್ನೆತ್ತಿಕೊಂಡು ವೈದ್ಯರ ಬಳಿ ಓಡಿದೆ. ವೈದ್ಯರು ಭಯ ಪಡುವಂತದ್ದೇನೂ ಇಲ್ಲ, ಇದು ಹೆಣ್ಣು ಶಿಶುಗಳಲ್ಲಿ ಸಾಮಾನ್ಯ, ಗರ್ಭದ ಮೊದಲ ಸ್ರಾವ ಇದು, ಎಲ್ಲ ಹೆಣ್ಣು ಶಿಶುಗಳಲ್ಲಿಯೂ ಇದು ಕಾಣಿಸಿಕೊಳ್ಳುತ್ತದೆ, ಇದು ಸಹಜತೆಯ ಸಂಕೇತ ಅಂದರು. ಅದರ ಗರ್ಭ ಪುಟ್ಟದಾದರೂ ಇನ್ನೂ ಬೆಳೆದಿಲ್ಲವಾದರೂ ಅದು ಒಂದು ಗರ್ಭ, ಮತ್ತದು ಸ್ರವಿಸಲೇಬೇಕು... ಹೆಣ್ಣಾಗಿ ಹುಟ್ಟಿದ್ದಕ್ಕೆ. ಇದೊಂದು ಶಾಪ ಅನ್ನಿಸಲಿಲ್ಲ. ಆದರೆ ವರವೆಂದು ಸಂಭ್ರಮಿಸಲೂ ಇಲ್ಲ. ಈ ಭಾವಕ್ಕೆ ಏನೆಂದು ಹೆಸರು ಕೊಡಬಹುದು?

**ಆಶಾ ಜಗದೀಶ್**

ಗೌರಿಬಿದನೂರಿನಲ್ಲಿ ಶಿಕ್ಷಕಿ. ಕತೆ ಕವಿತೆ ಪ್ರಬಂಧ ಅವರ ಆಸಕ್ತಿಯ ಕ್ಷೇತ್ರಗಳು. ಕನ್ನಡ ಪುಸ್ತಕ ಪ್ರಾಧಿಕಾರದಿಂದ ಮೊದಲ ಕವನ ಸಂಕಲನ 'ಮೌನತಂಬೂರಿ' ಹೊರ ಬಂದಿದೆ. 2017ರ 'ಪ್ರಜಾವಾಣಿ' ಭೂಮಿಕಾ ಸಂಕ್ರಾಂತಿ ಲಲಿತ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, 2017ರ 'ಸುಧಾ' ಯುಗಾದಿ ಪ್ರಬಂಧ ಸ್ಪರ್ಧೆಯಲ್ಲಿ ತೃತೀಯ ಬಹುಮಾನ ಬಂದಿದೆ.